ಅಕು– ಯಿಕ ಎಲ್ಲಿಗೋ ಹೊರಟಿರುವ ಹಾಗೆ ಕಾಣಿಸಿತು.
ಆಸೋಯಿ ಕೇಳಿದ, "ಯಾವ ಕಡೆಗೊ?"
ಅಕು– ಯಿಕ ಹೇಳಿದ, "ತಪಸ್ಸಿಗೆ !"
"ತಪಸ್ಸಿಗೆ! ತಪಸ್ಸು ಮಾರ್ಕೆಟ್‌ನಲ್ಲಿ !"
"ಅಲ್ಲ, ನಾನು ಕಾಡಿಗೆ ಹೊರಟಿದ್ದೇನೆ..."



"ಕಾಡಿನಲ್ಲಿ ತಪಸ್ಸು ಮಾಡ್ತೀಯಾ? ಅದೆಷ್ಟು ಪ್ರಾಣಿ, ಪಕ್ಷಿಗಳು ಕಾಡಿನಲ್ಲಿಯೇ ಇವೆ. ಅವುಗಳಿಗೆಲ್ಲಿಯಾದರೂ ಜ್ಞಾನೋದಯವಾದದ್ದು ನಿನಗೆ ತಿಳಿದಿದೆಯೊ?"
ಅಕು– ಯಿಕ ಪೆಚ್ಚಾಗಿ ನಕ್ಕ.
ಅಷ್ಟರಲ್ಲಿ ಮರದ ಮೇಲಿದ್ದ ಹಕ್ಕಿಯೊಂದು ಹೇಳಿತು, "ನಾನು ಕಾಡಿನ ಹಕ್ಕಿ. ನನಗೆ ಜ್ಞಾನೋದಯವಾದುದರಿಂದಲೇ ನಾನು ಮಾತನಾಡುವುದನ್ನು ಬಿಟ್ಟು ಹಾಡುವುದನ್ನು ಕಲಿತದ್ದು..."

ಉದಯವಾಣಿ
# ಸಾಪ್ತಾಹಿಕ ಸಂಪದ
ಜುಲೈ 15, 2012, ರವಿವಾರ

# ಪಡುಮಲೆಯ ಒಡಲಲ್ಲಿ...

ಕೇರಳ, ತಮಿಳುನಾಡು, ಮಹಾರಾಷ್ಟ್ರ– ಹೀಗೆ ಇತರೆಲ್ಲ ರಾಜ್ಯಗಳು ಪಶ್ಚಿಮ ಘಟ್ಟ ಶ್ರೇಣಿಯನ್ನು 'ನೈಸರ್ಗಿಕ ಪರಂಪರೆಯ ತಾಣ'ವನ್ನಾಗಿ ಗುರುತಿಸಲು ಸಂತೋಷದಿಂದ ಮುಂದೆ ಬಂದಿರುವಾಗ ಕರ್ನಾಟಕವಷ್ಟೇ ಇದನ್ನು ವಿರೋಧಿಸಿದ್ದೇಕೆ, ಈ 'ಗುರುತಿಸುವಿಕೆ'ಯ ಸಾಧಕ–ಬಾಧಕಗಳೇನು ಎಂಬುದು ಮೂಲಭೂತ ಪ್ರಶ್ನೆ...



ಫೋಟೊ : ನಿರೇನ್ ಜೈನ್

ನಿರೇನ್ ಜೈನ್
ದೀಪಿಕಾ ಪ್ರಸಾದ್

ವಿಶ್ವಸಂಸ್ಥೆಯ ಶೈಕ್ಷಣಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಅಂಗಸಂಸ್ಥೆ (ಯುನೆಸ್ಕೊ) ನಮ್ಮ ಪಶ್ಚಿಮ ಘಟ್ಟವನ್ನು 'ಜಾಗತಿಕ ನೈಸರ್ಗಿಕ ಪರಂಪರೆ ಯಾದಿ'ಯಲ್ಲಿ ಸೇರ್ಪಡೆಗೊಳಿಸಿದೆ. ನಮಗೆ ಇದೊಂದು ಹೆಮ್ಮೆಯ, ಪ್ರತಿಷ್ಠೆಯ ವಿಚಾರವಲ್ಲದೆ ಮತ್ತೇನು?

ಕರ್ನಾಟಕ, ಕೇರಳ, ಗೋವಾ, ತಮಿಳುನಾಡು, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಅವಿಚ್ಛಿನ್ನ ಎಂಬಂತೆಯೇ ಹರಡಿ ಹಬ್ಬಿರುವ (ಪಾಲ್ಘಾಟ್ ಸಂದನ್ನು ಹೊರತುಪಡಿಸಿ) 1,600 ಕಿ.ಮೀ. ವ್ಯಾಪ್ತಿಯ ಪಶ್ಚಿಮ ಘಟ್ಟ ಶ್ರೇಣಿಯನ್ನು ಇಡಿಯಾಗಿ ಸಂರಕ್ಷಿತ ಪ್ರದೇಶವಾಗಿ ಕಾಯ್ದುಕೊಳ್ಳುವುದು ಅಕ್ಷರಶಃ ಕಾರ್ಯಸಾಧ್ಯವಲ್ಲ. ಹಾಗಾಗಿ, ಭಾರತ ಸರಕಾರ ನೇಮಿಸಿದ 'ನೇಮಕ ಸಮಿತಿ'ಯು ಪಶ್ಚಿಮ ಘಟ್ಟ ಶ್ರೇಣಿಯನ್ನು ಒಂದು 'ನೈಸರ್ಗಿಕ ಪರಂಪರೆಯ ಸರಣಿ'ಯಾಗಿ ಗುರುತಿಸಲು ಪ್ರಸ್ತಾವನೆ ಸಲ್ಲಿಸಿದೆ. ಈ ಸರಣಿಯಲ್ಲಿ ಒಟ್ಟು 7 ವಿಭಾಗಗಳಿವೆ – ಕೇರಳ ಮತ್ತು ತಮಿಳುನಾಡಿನ ನಾಲ್ಕು ಪ್ರದೇಶಗಳು, ಮಹಾರಾಷ್ಟ್ರದ ಒಂದು ಮತ್ತು ಕರ್ನಾಟಕದ ಎರಡು. ಇದರಲ್ಲಿ ಕರ್ನಾಟಕ, ಕುದುರೆಮುಖ–ಆಗುಂಬೆ– ಸೋಮೇಶ್ವರ ಪ್ರದೇಶ ಮತ್ತು ಪುಷ್ಪಗಿರಿ–ತಲಕಾವೇರಿ–ಬ್ರಹ್ಮಗಿರಿ ಈ ಎರಡು ಪ್ರದೇಶಗಳನ್ನು ಒಳಗೊಳ್ಳುತ್ತದೆ. ಈ ಪ್ರದೇಶಗಳನ್ನು ಆಳವಾದ ಅಧ್ಯಯನದ ಬಳಿಕ ನೈಸರ್ಗಿಕ ಪರಂಪರೆಯ ಯಾದಿಯಲ್ಲಿ ಗುರುತಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಯುನೆಸ್ಕೊ ತನ್ನದೇ ಮಾನದಂಡವನ್ನು ಬಳಸುತ್ತದೆ – ನೈಸರ್ಗಿಕ ಸೌಂದರ್ಯ, ಅಗಾಧ ಜೀವ ವೈವಿಧ್ಯ ಮತ್ತು ವಿನಾಶದಂಚಿನಲ್ಲಿ ಇರುವ ಜೀವ ಸಂಕುಲ ಇರುವ ಪ್ರದೇಶ – ಇತ್ಯಾದಿ.

ಜನಸಾಮಾನ್ಯರೇನೋ ಪಶ್ಚಿಮ ಘಟ್ಟವನ್ನು ಜಾಗತಿಕ ನೈಸರ್ಗಿಕ ಪರಂಪರೆಯ ಯಾದಿಯಲ್ಲಿ ಸೇರಿಸುವ ಸುದ್ದಿಯನ್ನು ತಿಳಿದು ಸಂಭ್ರಮಿತರಾಗಿದ್ದಾರೆ. ಕರ್ನಾಟಕ ಸರಕಾರ ಹಿಂದುಮುಂದು ಯೋಚಿಸದೆ ಈ ಪ್ರಸ್ತಾವನೆಯನ್ನು ತಿರಸ್ಕರಿಸಿದೆ ಎಂದು ಖತಿಗೊಂಡಿದ್ದಾರೆ ಕೂಡ. ನಮ್ಮ ಪಶ್ಚಿಮ ಘಟ್ಟ ನಿಜವಾಗಿಯೂ ಜಾಗತಿಕ ಪರಂಪರೆಯ ತಾಣ ಎಂಬ ಹಣೆಪಟ್ಟಿಯನ್ನು ಲಗತ್ತಿಸಿಕೊಳ್ಳುವುದಕ್ಕೆ ಯೋಗ್ಯವೆ! ಇದು ಈಗ ಸಾಮಾನ್ಯ ಜನರ ಕುತೂಹಲ. ಕೇರಳ, ತಮಿಳುನಾಡು, ಮಹಾರಾಷ್ಟ್ರ – ಹೀಗೆ ಇತರೆಲ್ಲ ರಾಜ್ಯಗಳು ಪಶ್ಚಿಮ ಘಟ್ಟ ಶ್ರೇಣಿಯನ್ನು 'ನೈಸರ್ಗಿಕ ಪರಂಪರೆಯ ತಾಣ'ವನ್ನಾಗಿ ಗುರುತಿಸಲು ಸಂತೋಷದಿಂದ ಮುಂದೆ ಬಂದಿರುವಾಗ ಕರ್ನಾಟಕವಷ್ಟೇ ಇದನ್ನು ವಿರೋಧಿಸಿದ್ದೇಕೆ, ಸ್ಥಳೀಯ ಜನರಿಗೆ ಈ 'ಗುರುತಿಸುವಿಕೆ'ಯ ಸಾಧಕ–ಬಾಧಕಗಳೇನು– ಇದು ಜನಸಾಮಾನ್ಯರ ಪ್ರಶ್ನೆ. ಹಾಗೆ ಹೇಳಬೇಕೆಂದರೆ ಪಶ್ಚಿಮ ಘಟ್ಟ ಶ್ರೇಣಿಯ ಒಂದು ಪಾಲು ಗೋವಾ ರಾಜ್ಯದಲ್ಲೂ ಇದೆ. ಆದರೆ, ಆ ರಾಜ್ಯದಲ್ಲಿರುವ ಪಶ್ಚಿಮ ಘಟ್ಟ ಶ್ರೇಣಿಯ ಯಾವ ಪ್ರದೇಶವನ್ನೂ 'ನೈಸರ್ಗಿಕ ಪರಂಪರೆ'ಯ ಯಾದಿಯಲ್ಲಿ ಗುರುತಿಸುವ ಪ್ರಸ್ತಾವನೆಯಿಲ್ಲ. ಆದರೆ, ಗೋವಾ ರಾಜ್ಯ ಸರಕಾರ 'ನಮ್ಮಲ್ಲಿರುವ ಪಶ್ಚಿಮ ಘಟ್ಟ ಪ್ರದೇಶವನ್ನು ಜಾಗತಿಕ ನೈಸರ್ಗಿಕ ಪರಂಪರೆಯ ಯಾದಿಯಲ್ಲಿ ಗುರುತಿಸಿ' ಎಂಬುದಾಗಿ ಭಾರತ ಸರಕಾರವನ್ನು ಕೇಳಿಕೊಂಡಿದೆ.

## 'ಜಾಗತಿಕ ಪರಂಪರೆಯ ಯಾದಿ' ಎಂದರೇನು?

ದೇಶ–ದೇಶಗಳ ಎಲ್ಲೆಗಳನ್ನು ಮೀರಿದ ಅಸಾಧಾರಣ ಜಾಗತಿಕ ಮೌಲ್ಯವುಳ್ಳ ಇಂದು–ನಾಳೆಯ ಮಾನವ ಸಂಕುಲಕ್ಕೆ ಪ್ರಾಮುಖ್ಯವನ್ನು ಪಡೆದ, ವಿನಾಶದ ಎಲ್ಲ ಅಪಾಯಗಳಿಂದ ಸಂರಕ್ಷಿಸಲ್ಪಡಬೇಕಾದ ಸ್ಥಳ ಎಂಬುದಾಗಿ ಯುನೆಸ್ಕೊದ 'ಜಾಗತಿಕ ಪರಂಪರೆಯ ತಾಣ'ದ ಒಡಂಬಡಿಕೆ ಹೇಳುತ್ತದೆ.

## ನಾವು ಬಯಸಿದ್ದೆ?

ಹೌದು. ಆರು ವರ್ಷಗಳ ಹಿಂದೆ, 2006ರಲ್ಲಿ ಭಾರತ ಸರಕಾರವೇ ಪಶ್ಚಿಮ ಘಟ್ಟ ಶ್ರೇಣಿಯ ಕೆಲವು ಪ್ರದೇಶಗಳನ್ನು ವಿಶ್ವಪರಂಪರೆಯ ಯಾದಿಯಲ್ಲಿ ಗುರುತಿಸುವಂತೆ ಯುನೆಸ್ಕೊಗೆ ಮನವಿ ಸಲ್ಲಿಸಿತ್ತು.

'ವಿಶ್ವ ನೈಸರ್ಗಿಕ ಪರಂಪರೆಯ ತಾಣ'ಗಳ ಯಾದಿಯಲ್ಲಿ ಗುರುತಿಸಿ ಎಂಬುದಾಗಿ ಪ್ರಸ್ತಾವನೆ ಸಲ್ಲಿಸಿದರಷ್ಟೇ ಸಾಲದು. ಈ ಹಿಂದೆಯೇ ಹೇಳಿದ ಹಾಗೆ ಯಾವುದೇ ಪ್ರದೇಶವನ್ನು 'ಜಾಗತಿಕ ನೈಸರ್ಗಿಕ ಪರಂಪರೆಯ ಯಾದಿ'ಯಲ್ಲಿ ಸೇರಿಸಿಕೊಳ್ಳಬೇಕಾದರೆ ಯುನೆಸ್ಕೊ ತನ್ನದೇ ಮಾನದಂಡವನ್ನು ಅನುಸರಿಸುತ್ತದೆ. ಯುನೆಸ್ಕೊದ 'ಜಾಗತಿಕ ನೈಸರ್ಗಿಕ ಪರಂಪರೆಯ ಯಾದಿ'ಯಲ್ಲಿ ಸೇರ್ಪಡೆಗೊಳ್ಳಲು 180 ಅಂಶಗಳನ್ನು 'ಅಸಾಧಾರಣ ಜಾಗತಿಕ ಮೌಲ್ಯ' ಮಾಪನಕ್ಕೆ ಬಳಸಲಾಗುತ್ತದೆ.



ಫೋಟೊ : ನಿರೇನ್ ಜೈನ್

## ಏನಿದರ ಪ್ರಯೋಜನ?

'ಜಾಗತಿಕ ನೈಸರ್ಗಿಕ ಪರಂಪರೆಯ ತಾಣ'ವಾಗಿ ಪಶ್ಚಿಮ ಘಟ್ಟವನ್ನು ಗುರುತಿಸುವುದರಿಂದ ಪಶ್ಚಿಮ ಘಟ್ಟ ಪ್ರದೇಶದ ಸಂರಕ್ಷಣೆಗೆ ತಾತ್ವಿಕ ತಳಹದಿಯೊಂದು ದೊರೆತಂತಾಗುತ್ತದೆ. 'ಜಾಗತಿಕ ನೈಸರ್ಗಿಕ ಪರಂಪರೆಯ ತಾಣ'ವಾಗಿ ಗುರುತಿಸಿಕೊಂಡ ಮೇಲೆ ಪಶ್ಚಿಮ ಘಟ್ಟ ಪ್ರದೇಶಗಳು ಎದುರಿಸುವ ಯಾವುದೇ ಅಪಾಯ/ಸಮಸ್ಯೆಗಳನ್ನು ವಿವಿಧ ರಾಜಕೀಯ, ಆಡಳಿತಾತ್ಮಕ ಅಥವಾ ನ್ಯಾಯ ವೇದಿಕೆಗಳ ಮುಂದೆ ಮಂಡಿಸಲು ಪರಿಸರವಾದಿಗಳಿಗೆ ಗಟ್ಟಿ ನೆಲೆಗಟ್ಟೊಂದು ಲಭ್ಯವಾಗುತ್ತದೆ. ಇಷ್ಟಲ್ಲದೆ, 'ಜಾಗತಿಕ ನೈಸರ್ಗಿಕ ಪರಂಪರೆಯ ತಾಣ'ಗಳನ್ನು ವಿನಾಶದಿಂದ ರಕ್ಷಿಸಲು ಯುನೆಸ್ಕೊ ತನ್ನದೇ ಆದ ಪ್ರತಿಸ್ಪಂದಕ ಸರ್ವೇಕ್ಷಣೆ' ಹಾಗೂ 'ಕಾಲಾನುಕಾಲಿಕ ವರದಿ'ಗಳ ವ್ಯವಸ್ಥೆಯನ್ನು ಹೊಂದಿದೆ. ಇದರಿಂದಾಗಿ ನೈಸರ್ಗಿಕ ಪರಂಪರೆಯ ಯಾದಿಯಲ್ಲಿ ಗುರುತಿಸಲ್ಪಟ್ಟ ಪ್ರದೇಶಗಳಲ್ಲಿ ಯಾವುದೇ ವಿನಾಶಕಾರಿ ಚಟುವಟಿಕೆಗಳನ್ನು ನಡೆಸಲು ಗಣಿ, ಮರಮಟ್ಟು ವಹಿವಾಟು ಅಥವಾ ಇನ್ನಿತರ ಲಾಬಿಗಳಿಗೆ ಕಷ್ಟಸಾಧ್ಯ.

ಎಲ್ಲಾ ಜಾಗತಿಕ ನೈಸರ್ಗಿಕ ಪರಂಪರೆಯ ತಾಣಗಳನ್ನು ಸಂರಕ್ಷಿಸಲು ಮತ್ತು ನಿರ್ವಹಿಸಲು ದೀರ್ಘಕಾಲೀನ ಕ್ರಮಗಳು ಅಗತ್ಯ. ಈ ಕ್ರಮಗಳು ಸ್ಥಳೀಯ ಸಾಂಪ್ರದಾಯಿಕ ಶಾಸನ ವಿಧಿತ ಮತ್ತು ನಿರ್ಬಂಧಕ ವಿಧಿಗಳ ಜೊತೆಗೆ ಪರಿಣಾಮಕಾರಿ ಮೇಲ್ವಿಚಾರಣೆ ಹಾಗೂ ಅಂತಾರಾಷ್ಟ್ರೀಯ ಮಟ್ಟದ ವಿಜ್ಞಾನಿಗಳು ಮತ್ತು ತಜ್ಞರಿಂದ ವೈಜ್ಞಾನಿಕ ನಿರ್ವಹಣೆಯ ಮೂಲಕ ಸುಪುಷ್ಟಗೊಂಡಿರಬೇಕು. ಆಗ ಮಾತ್ರ 'ಜಾಗತಿಕ ನೈಸರ್ಗಿಕ ಪರಂಪರೆಯ ತಾಣ'ಗಳ ಪರಿಣಾಮಕಾರಿ ಸಂರಕ್ಷಣೆ ಸಾಧ್ಯ.

'ಜಾಗತಿಕ ನೈಸರ್ಗಿಕ ಪರಂಪರೆಯ ತಾಣ'ವೊಂದರ ದೇಖರೇಖಿಯನ್ನು ಆಯಾ ರಾಜ್ಯಗಳು ಸರಿಯಾಗಿ ನಿರ್ವಹಿಸಲು ವಿಫಲವಾದರೆ, ಆ ತಾಣಗಳಿಗೆ ಸಂಭಾವ್ಯ ಅಥವಾ ಖಚಿತ ಆಪತ್ತು ಎದುರಾಗಿದೆ ಎಂದಾದರೆ, ಆಗ ಯುನೆಸ್ಕೊ ಆ ತಾಣವನ್ನು 'ಅಪಾಯದಲ್ಲಿರುವ ಜಾಗತಿಕ ನೈಸರ್ಗಿಕ ಪರಂಪರೆಯ ತಾಣ' ಎಂಬುದಾಗಿ ವರ್ಗೀಕರಿಸುತ್ತದೆ. ಜಾಗತಿಕ ನೈಸರ್ಗಿಕ ಪರಂಪರೆಯ ತಾಣವನ್ನು ಮತ್ತಷ್ಟು

ನಾಲ್ಕನೇ ಪುಟಕ್ಕೆ

# ಹರೆಯದ ಹುಡುಗರ ತೀರ್ಥಯಾತ್ರೆ

ಶೃಂಗೇರಿ ದೇವಸ್ಥಾನದೆದುರಿನ ಕಲ್ಲು ಮಂಟಪ. ಅಲ್ಲಿಬ್ಬರು ಕಾಲ್‌ಸೆಂಟರ್ ಯುವಕರು ಕುಳಿತು ಆಕಾಶ ನೋಡುತ್ತಿದ್ದಾರೆ. ಸಂಜೆಯ ಹೊತ್ತು.

'ಆ ಬೆಂಗಳೂರು ಬಿಟ್ಟು ಓಡಿದರೆ ಸಾಕು ಅನ್ನಿಸುತ್ತೆ ಮಾರಾಯ' ಒಬ್ಬ ಹೇಳುತ್ತಾನೆ.

ಇನ್ನೊಬ್ಬ ತದೇಕಚಿತ್ತದಿಂದ ಆಕಾಶ ನೋಡುತ್ತಾನೆ. ಮಾತನಾಡುವುದಿಲ್ಲ.

ಯಾವ ತಕರಾರೂ ಇಲ್ಲದೆ ರಾತ್ರಿ ಹತ್ತೂವರೆಗೆ ಇಬ್ಬರೂ ಬೆಂಗಳೂರಿನ ಬಸ್ಸು ಹತ್ತುತ್ತಾರೆ.

•

ವೈಷ್ಣೋದೇವಿಗೆ ಹೋಗಿ ಬಂದ ಎಂಟು ಮಂದಿ ಸಾಫ್ಟ್‌ವೇರ್ ಇಂಜಿನಿಯರುಗಳ ತಂಡ ಒಂದು ವಾರದ ನಂತರ ಬ್ರಿಗೇಡ್ ರೋಡಿನ ಪಬ್ಬೊಂದರಲ್ಲಿ ಗೆಳೆಯನ ಬರ್ತ್‌ಡೇ ಪಾರ್ಟಿಗಾಗಿ ಬೆವರು ಹರಿಸಿ ಕುಣಿಯುತ್ತದೆ.

ಟೀವಿ ಚಾನಲ್ ಕಚೇರಿಯ ನೈಟ್ ಶಿಫ್ಟುಗಳಲ್ಲಿ ನಿದ್ದೆಗೆಡುವ ನಾಲ್ಕೈದು ಹುಡುಗರು ಕಷ್ಟಪಟ್ಟು ರಜೆ ಹೊಂದಿಸಿಕೊಂಡು ಮೂರೇ ದಿನದ ಮಟ್ಟಿಗೆ ತಮಿಳುನಾಡಿನ ಮದುರೈ, ಕಾಂಚೀಪುರಂ, ರಾಮೇಶ್ವರಂ ಹಾಗೂ ಕನ್ಯಾಕುಮಾರಿಯನ್ನು ಸುತ್ತಿ ಬರುತ್ತಾರೆ.

ಇವರಿಗೆಲ್ಲ ಸಾಧ್ಯವಾದರೆ ಜೀವನದಲ್ಲೊಮ್ಮೆ ಮಾನಸ ಸರೋವರಕ್ಕೆ ಹೋಗಿ ಬರಬೇಕೆಂಬ ಕನಸಿದೆ. ಅದಕ್ಕೂ ಮೊದಲು ಖಂಡಿತ ಇವರು ಅಮರನಾಥನ ದರ್ಶನ ಮಾಡಿ ಬರುತ್ತಾರೆ. ಯಾತ್ರೆಗಿಂತ ಹೆಚ್ಚಾಗಿ ಅದು ಇವರಿಗೊಂದು ಸಾಹಸ, ಜೊತೆಗೆ 'ದೇಶ ನೋಡು' ಜ್ಞಾನ ಸಂಪಾದನೆ.

ಇದು ಪೈಪೋಟಿಯ ಒತ್ತಡದಲ್ಲಿ ಮೈದಣಿಯೆ ದುಡಿಯುವ ಹರೆಯದ ಹುಡುಗರ ಲೋಕದ ಹೊಸ ಟ್ರೆಂಡು. ಇವರು ಮದುವೆಗೆ ಮುಂಚೆಯೇ ಕಾಶಿಯಾತ್ರೆ ಮಾಡುತ್ತಾರೆ. ವೀಕೆಂಡುಗಳಲ್ಲಿ ಕಾರು ಮಾಡಿಕೊಂಡು ಧಾರ್ಮಿಕ ಕ್ಷೇತ್ರಗಳನ್ನು ಸುತ್ತುತ್ತಾರೆ. ಈ ವಯಸ್ಸಲ್ಲಿ ಮಗ/ಮಗಳು ಯಾವುದೋ ದೇವಸ್ಥಾನಕ್ಕೆ ಹೋಗಿದ್ದೆ ಎಂದು ತೀರ್ಥ ಪ್ರಸಾದ ತಂದು ಕೈಗಿಡುವುದನ್ನು ನೋಡಿ ಅಪ್ಪ ಅಮ್ಮಂದಿರಿಗೆ ಆಶ್ಚರ್ಯವಾದರೂ ಒಂಥರಾ ಖುಷಿಯೆನ್ನಿಸುತ್ತದೆ. ಅಜ್ಜಿ, ಮುಂದಿನ ಸಲ ನನ್ನನ್ನೂ ಕರೆದುಕೊಂಡು ಹೋಗ್ರೋ ಎನ್ನುತ್ತಾಳೆ. ಇವರು ಕರೆದುಕೊಂಡು ಹೋಗುವುದಿಲ್ಲ.



ಫೋಟೋ : ಹರೀಶ ಹಳೆಮನೆ

'ಎರಡು ತಿಂಗಳಿಗೊಂದು ಸಲವಾದರೂ ಹೊರನಾಡಿಗೆ ಹೋಗದಿದ್ರೆ ಮನಸ್ಸಿಗೆ ಸಮಾಧಾನವೇ ಇಲ್ಲ. ಅಲ್ಲಿ ಒಂದು ವೀಕೆಂಡ್ ಕಳೆದು ಬಂದ್ರೆ ಮತ್ತೆ ಎಂಟು ವಾರ ಶಹರದ ಬದುಕೆಂಬ ಟ್ರಾಫಿಕ್ ಜಾಮ್‌ನಲ್ಲಿ ಈಜುವ ಶಕ್ತಿ ಬರುತ್ತದೆ. ನಾನೇನೂ ಮಹಾನ್ ದೈವಭಕ್ತನಲ್ಲ. ಹೊರನಾಡಿಗೆ ಹೋದಾಗಲೆಲ್ಲ ದೇವೀದರ್ಶನ ಮಾಡಿಯೇಬಿಡುತ್ತೇನೆಂದು ಹೇಳಲಾರೆ. ಆ ಜಾಗದಲ್ಲಿದ್ದು ಬಂದರೆ ಸಾಕು, ಅದೇನೋ ಖುಷಿ' ಎಂದು ಇಂಗ್ಲಿಷ್‌ನಲ್ಲಿ ಬ್ಲಾಗ್ ಬರೆಯುವ ಮೈಸೂರಿನ ರಮೇಶ್ ಪರಾಂಜಪೆ ಸೊಂಟದ ಕೆಳಗೆ ಜಾರುವ ಜೀನ್ಸ್ ತೊಟ್ಟು, ಬೀಯಿಂಗ್ ಹ್ಯೂಮನ್ ಟೀಶರ್ಟ್ ಹಾಕಿಕೊಂಡು ಕ್ಯಾಡ್‌ಬರೀಸ್ ಮಾರಾಟ ಮಾಡುವ ಸೇಲ್ಸ್ ರೆಪ್. ಅವನ ತಂದೆ ಪರಮ ನಾಸ್ತಿಕ.

ಹಳೆಯ ಕಾಲದಲ್ಲಿ ತೀರ್ಥಯಾತ್ರೆಗೆ ಹೊರಟಿದ್ದಾರೆಂದರೆ ಅವರ ಗಡ್ಡ ಹಣ್ಣಾಗಿರುತ್ತಿತ್ತು. ಇಂದು ಇಪ್ಪತ್ತು ದಾಟಿದವರು ಒಬ್ಬಂಟಿಯಾಗಿ ದೇವಸ್ಥಾನದೆದುರಿನ ಹುಲ್ಲುಹಾಸಿನ ಮೇಲೆ ಕಣ್ಮುಚ್ಚಿ ಕುಳಿತಿರುವ ದೃಶ್ಯ ಬಹಳ ಕಾಮನ್. ಅವರೇನೂ ಯೋಗ ಸಾಧಕರಲ್ಲ. ಅವರಿಗೆ ಗಾಯತ್ರಿ ಮಂತ್ರ ಗೊತ್ತಿದೆಯೋ ಇಲ್ಲವೋ. ಅವರು ದೇವರನ್ನು ಹುಡುಕುತ್ತಿಲ್ಲ. ಆತ್ಮಶೋಧನೆಯೂ ದೊಡ್ಡ ಪದ. ಅವರ ಉದ್ದೇಶ ಬಹಳ ಸರಳ. ಮನಸ್ಸು ಖಾಲಿ ಮಾಡುವುದು.

ಆಧುನಿಕ ಜೀವನ ಶೈಲಿಯ ಅನಿವಾರ್ಯ ಕೊಡುಗೆಯಾಗಿ ಬಂದಿರುವ ಒತ್ತಡದಿಂದ ಮುಕ್ತರಾಗಲು ಯುವಜನತೆ ಕಂಡುಕೊಂಡಿರುವ ಮಾರ್ಗವಿದು. ಮಹಾನಗರಗಳಲ್ಲಿ ಕೆಲಸಕ್ಕೆ ಸೇರಿ ಐದಾರು ವರ್ಷ ಕಳೆದಿರುವ ಹೆಚ್ಚಿನವರನ್ನು ನೋಡಿ, ಅವರ ಅಪ್ಪ ಅಮ್ಮಂದಿರು ಸುತ್ತಿರುವುದಕ್ಕಿಂತ ಹೆಚ್ಚು ಮಠ ಮಂದಿರಗಳನ್ನು ಇವರು ಸುತ್ತಿರುತ್ತಾರೆ. ಅಜ್ಜ ಗಯಾಕ್ಕೆ ಹೊರಟರೆ ಇವರು ಟಿಪ್ಸ್ ನೀಡಬಲ್ಲರು!

ಪಿಕ್‌ನಿಕ್ ಕಾನ್ಸೆಪ್ಟ್ ಈಗ ರುಚಿ ಕಳೆದುಕೊಂಡಿದೆ. ತಿಂಗಳ ಟಾರ್ಗೆಟ್ಟಿನ ಬೆನ್ನು ಹತ್ತಿರುವ ಅಂಕಲ್‌ಗಳಿಗೆ ಇದಕ್ಕೆಲ್ಲ ಪುರುಸೊತ್ತಿಲ್ಲ. ಮಕ್ಕಳ ಶಾಲೆ, ಟ್ಯೂಶನ್ನು, ಸಮ್ಮರ್ ಕ್ಯಾಂಪುಗಳಲ್ಲಿ ವ್ಯಸ್ತರಾಗಿರುವ ಹೆಂಗಸರಿಗೆ ಇಂತಹ ಪ್ರವಾಸಗಳ ನೆನಪೂ ಆಗುವುದಿಲ್ಲ. ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಸುತ್ತುವವರು, ಅದರಲ್ಲೂ ಮನಶ್ಶಾಂತಿಯನ್ನು ಹುಡುಕಿಕೊಂಡು ಅಲೆಯುವವರು ಪ್ರಾಯದ ಹುಡುಗರೇ. ಹೀಗೆ ಸುತ್ತುವವರಲ್ಲಿ ಕೆಲವರು ಮದುವೆಯಾಗುತ್ತಿದ್ದಂತೆ ಮನೆಗಂಟಿಕೊಂಡು ಬಿಡುತ್ತಾರೆ. ಇನ್ನು ಕೆಲವರು ಹೆಂಡತಿಯನ್ನೂ, ಗೆಳೆಯನ ಸಂಸಾರವನ್ನೂ ಕಟ್ಟಿಕೊಂಡು ಮಂತ್ರಾಲಯ, ಬನಶಂಕರಿಗೆ ಹೊರಟು ನಿಲ್ಲುತ್ತಾರೆ.

ಫೇಸ್‌ಬುಕ್ಕಿನಲ್ಲಿ ಯುವ ತೀರ್ಥಯಾತ್ರಿಗಳ ಕಮ್ಯುನಿಟಿಯೇ ಇದೆ. ಇವರು ಧಾರ್ಮಿಕ ಕ್ಷೇತ್ರ ಸುತ್ತಿ ಬಂದ ಅನುಭವವನ್ನು ಪರಸ್ಪರ ಹಂಚಿಕೊಳ್ಳುತ್ತಾರೆ. ಟ್ವೀಟ್ ಮಾಡುತ್ತಾರೆ, ಬ್ಲಾಗ್ ಬರೆಯುತ್ತಾರೆ. ಮಾಹಿತಿ ಕೇಳಿದರೆ ಕೈಯೆತ್ತಿ ಕೊಡುತ್ತಾರೆ. ಸಮಯ ಸಿಕ್ಕಾಗ ವೃದ್ಧಾಶ್ರಮಗಳಿಗೆ ಭೇಟಿ ನೀಡುವುದು, ಹುಟ್ಟುಹಬ್ಬಗಳನ್ನು ಅನಾಥಾಲಯಗಳಲ್ಲಿ ಆಚರಿಸಿಕೊಳ್ಳುವುದು, ಸಮಾನ ಮನಸ್ಕರ ಗುಂಪು ರಚಿಸಿಕೊಂಡು ಇಂಟರ್ನೆಟ್‌ನಲ್ಲಿ ದೇಣಿಗೆ ಸಂಗ್ರಹಿಸಿ ಒಳ್ಳೆಯ ಕೆಲಸಕ್ಕೆ ನೀಡುವುದು ಇಂಥವರ ಇನ್ನಷ್ಟು ಖಯಾಲಿಗಳು.

ಹಾಗಂತ, ಯುವಕರು ಹಾಳಾಗುತ್ತಿದ್ದಾರೆಂಬ ಹಳಹಳಿಕೆಗೆ ಇದು ಉತ್ತರವಲ್ಲ. ಇದಕ್ಕೂ ಅದಕ್ಕೂ ಸಂಬಂಧವಿಲ್ಲ. ಮೊನ್ನೆಯಷ್ಟೇ ಪುಷ್ಪಗಿರಿ ಟ್ರೆಕ್ ಮಾಡಿ ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಿ ಬಂದೆವು ಎಂದು ಹೇಳುವವರೇ ಆಫೀಸಿನ ಪಾರ್ಟಿಯಲ್ಲಿ ಗಂಟಲು ತುಳುಕುವಷ್ಟು ಕುಡಿದು ಬೆಳಗಿನ ಜಾವದಲ್ಲಿ ಮನೆ ಸೇರುತ್ತಾರೆ.

ಧರ್ಮ, ಮೋಕ್ಷ, ಪುಣ್ಯ, ಸತ್ಯ ಇತ್ಯಾದಿ ಯಾವುದೇ ಭಾರದ ಪದಗಳ ಗೊಡವೆಗೆ ಹೋಗದೆ ತಮ್ಮಷ್ಟಕ್ಕೆ ತಾವು ನೆಮ್ಮದಿಯಾಗಿರುವುದನ್ನು ಕಂಡುಕೊಂಡ ಹೊಸ ವರ್ಗ ಇವರದು. ಕೆಲಸ ಹೋದೀತೆಂದು ಇವರು ಚಿಂತಿಸುವುದಿಲ್ಲ. ಮದುವೆಯಾಗಿ ಸೆಟಲ್ ಆಗಬೇಕೆಂಬುದು ಇವರ ಬದುಕಿನ ಪರಮೋದ್ದೇಶವಲ್ಲ. ಏನನ್ನೋ ಸಾಧಿಸುತ್ತೇನೆಂದು ಹಗಲುಗನಸು ಕಾಣುವ ಜಾಯಮಾನ ಇವರದಲ್ಲ. ಈ ಕ್ಷಣಕ್ಕೆ ಖುಷಿಯಾಗಿರಬೇಕು, ಸಾಧ್ಯವಾಗುತ್ತಿಲ್ಲವೋ, ಈ ವೀಕೆಂಡ್‌ನಲ್ಲಿ ಅದನ್ನು ಹುಡುಕಿಕೊಳ್ಳಬೇಕು. ನಮ್ಮ ಖುಷಿ ನಮ್ಮ ಕೈಲಿದೆ ಎಂಬುದನ್ನು ಶಿರಸಾವಹಿಸಿ ನಂಬಿದವರು ಇವರು. ಆದ್ದರಿಂದಲೇ ದೇವಸ್ಥಾನಕ್ಕೆ ಹೋದರೂ ದೇವರನ್ನು ತಲೆಗೆ ತುಂಬಿಕೊಳ್ಳದೆ ಖಾಲಿಯಾಗಿ ಬರಬಲ್ಲರು.

ಹೀಗೆ ಹೋಗಿ ಬರುವವರಲ್ಲಿ ಎಷ್ಟೋ ಮಂದಿ ವಾಪಸಾದಾಗ ಹೊಸ ವ್ಯಕ್ತಿಯಾದೆ ಎಂದು ಹೇಳಿಕೊಳ್ಳುತ್ತಾರೆ. ಕೆಲವರು ಸಿಗರೇಟು ಬಿಟ್ಟೆ ಎನ್ನುತ್ತಾರೆ. ಕೆಲವರು ಅಮ್ಮನ ಜೊತೆ ಚೆನ್ನಾಗಿ ಮಾತನಾಡಲು ಆರಂಭಿಸುತ್ತಾರೆ. ಕೆಲವರು ಏಕ್‌ದಂ ಒಳ್ಳೆಯವರಾಗಿಬಿಡುತ್ತಾರೆ.

ಒಂದು ಕುತೂಹಲಕರ ಸಂಗತಿ ಏನೆಂದರೆ, ಭಾರತದ ಮೊದಲ ಯಾತ್ರಿಕನೂ ಅಪ್ಪಟ ಯುವಕನೇ. ಗೌತಮ ಬುದ್ಧ 2600 ವರ್ಷಗಳ ಹಿಂದೆ ಅವನು ಜ್ಞಾನೋದಯಕ್ಕಾಗಿ ನಡೆಸಿದ ಯಾತ್ರೆಯೇ ಈ ದೇಶದ ಪ್ರಥಮ ತೀರ್ಥಯಾತ್ರೆ.

ಪ್ರತಿವರ್ಷ ಮಾಲೆ ಹಾಕಿಕೊಂಡು ಶಬರಿಮಲೆಗೆ ಹೋಗುವವರು, ಪಂಢರಾಪುರಕ್ಕೆ ಪಾದಯಾತ್ರೆ ಮಾಡುವವರು, ಕೈಲಾಸ–ಮುಕ್ತಿನಾಥ ಪರ್ವತಕ್ಕೆ ಚಾರಣ ಮಾಡುವವರು, ಅಲಹಾಬಾದಿನ ಕುಂಭಮೇಳಕ್ಕೆ ತೆರಳುವವರೆಲ್ಲ ಹೆಚ್ಚಾಗಿ ಯುವಕರೇ.

ಮನಶ್ಶಾಂತಿಯೋ, ಸಾಹಸವೋ, ಜ್ಞಾನಾರ್ಜನೆಯೋ, ಕುತೂಹಲವೋ, ಧಾರ್ಮಿಕತೆಯೋ, ಕಾರಣ ಯಾವುದಾದರೇನು? ತೀರ್ಥಕ್ಷೇತ್ರಕ್ಕೆ ಹೊಸ ನೀರು ಹರಿಯುತ್ತಿದೆ. ಅದು ರಭಸದ ಹರಿವು.

ಮಹಾಬಲ ಸೀತಾಳಭಾವಿ

ಸುರಿಸುರಿವ ಬಿರುಮಳೆಯೆ । ತೆರಳೊಮ್ಮೆ, ಬಡಪಾಯಿ ।
ಬರಸುರಿವ ಬಯಲೂರಿಗೆ॥



ಮಳೆ ಮೀಯಿಸಿದ ಮರದ । ಚಿಲಿಪಿಲಿಯ ಒಡಲಲ್ಲಿ।
ಕಳೆದ ಗೂಡುಗಳ ಕಥನ॥



ಮಳೆ ಬಿಸಿಲು ಚಳಿ ಸೊಗದ । ಕೊಳಗಗಳೆ ಸುರಿದರೂ
ಕಳವಳವಿದೇಕೆ ಇಳೆಯೆ?॥

–ನವನೀತ

# ಕನ್ನಡದಲ್ಲೊಂದು ...

-ಎರಡನೇ ಪುಟದಿಂದ

ಒಳ್ಳೇ ಕತೆಯಾಯಿತಲ್ಲ! -ಅಂದುಕೊಂಡೆ. "ಈಗ ನೀನು ಹೇಳುತೀಯೋ, ಇಲ್ಲವೋ..." ದಬಾಯಿಸಿದಳು. "ಅದುನ್ನ ಕನ್ನಡದಲ್ಲಿ ಹೇಗೆ ಹೇಳಬೇಕು ಅಂತ ನಮ್ಮಪ್ಪನಾಣೆ ಗೊತ್ತಿಲ್ಲಮ್ಮ... ಇರ್ರ್... ಇರೂ... ಹ್ಞಾಂ ಬೇಕಾದರೆ ಸ್ಥಿರಾಹಾರ ಅಂತನ್ನು..." ಅಂದೆ.

"ಲೋ, ನಾನು ಕೇಳುತಿರೋದು ಹಾಗಂದರೇನು ಅಂತ! ನಿನ್ನ ಕನ್ನಡದ ಮನೇ ಹಾಳಾಯ್ತು!"

"ಥತ್... ಯಾವುದನ್ನ ಹಾಗಂದರೇನಂತ ಹೇಳಲೇ?"

"ವಾಟೀಸ್ ದಿ ಸ್ಟೇಪಲ್ ಫುಡ್ ಇನ್ ಕರ್ನಾಟಕ ಅಂತ ಪ್ರಕಲ್ಪು ಕೇಳ್ತು ಕಣೋ... ಬೆಳಿಗ್ಗೆ ಹೇಳುತೀನಿ ಅಂತ ಹೇಳಿ ಮಲಗಿಸಿಬಿಟ್ಟೆ. ಇನ್ನು ಬೆಳಿಗ್ಗೆ ಏಳುತ್ಲೇ ಶುರು ಮಾಡಿಬಿಡುತಾನೆ... ಹೋಮ್‌ವರ್ಕ್ಕಿಗೋ ಏನೋ, ಗೊತ್ತಿಲ್ಲ. ನಿಂಗೆ ಬೆಳಿಗ್ಗೆ ಫೋನು ಮಾಡೋಣ ಅಂದರೆ ಏಳೂವರೆವರೆಗೂ ನೀನು ಏರೋಬಿಕ್ಸ್‌ನಲ್ಲಿರುತೀ... ಅಷ್ಟರಲ್ಲಿ ಮಗು ಹೊರಟು ಬಿಟ್ಟಿರುತ್ತೆ..."

"ಸ್ಟೇಪಲ್ ಫುಡ್ ಅಂದರೆ ನಾವೆಲ್ಲ ಸಾಮಾನ್ಯವಾಗಿ ತಗೊಳ್ಳೋ ಒಂದು ಬಗೆಯ ಆಹಾರ ಅಂತ. ನಮ್ಮ ಊಟದಲ್ಲಿ ಹೆಚ್ಚಾಗಿ ಅಕ್ಕಿ ತಾನೇ ಬಳಸೋದು? ಹಾಗಾಗಿ ನಮ್ಮ ಸ್ಟೇಪಲ್ ಫುಡ್ ಅಕ್ಕಿ... ಅಥವಾ ಅನ್ನ...'

"ಮತ್ತೆ ರಾಗಿಮುದ್ದೇನೂ ತಿನ್ನುತ್ತೀವಲ್ಲೋ...?"

'ದಿನಾ ತಿನ್ನುತ್ತೀವೇನೆ? ನಾನು ಹೇಳಿದ್ದು ನಮ್ಮಗಳ ಮನೆಯ ಸ್ಟೇಪಲ್‌ಫುಡ್ಡು. ಇನ್ನೂ, ಇಡೀ ಕರ್ನಾಟಕದ್ದು ಅಂತ ಕೇಳಿದರೆ- ಅದಕ್ಕೊಂದು ಟಿಪ್ಪಣೀನೇ ಬರೀಬೇಕಾಗುತ್ತೆ...' ಅಂತಂದು ರಾಗಿ, ಜೋಳ, ಸಜ್ಜೆ, ನವಣೆಗಳ ಬಗ್ಗೆಯೂ ಆಡಿ, ಯಾವ ಯಾವ ಪ್ರದೇಶದಲ್ಲಿ ಯಾತಾತರ ಬಳಕೆಯಿದೆ ಅಂತೆಲ್ಲ ವಿವರಿಸಿದೆ.

'ಹಾಗಾದರೆ ಅವನಿಗೇನಂತ ಹೇಳಲಿ? ಅಕ್ಕಿ, ರಾಗಿ, ಜೋಳ... ಅಂತ ಹೇಳಲಾ?'

'ನಿಂಗೇನಾರ ತಲೆ ಅಂತಿದ್ದರೆ ಸ್ವಲ್ಪನಾದರೂ ಖರ್ಚು ಮಾಡಿಕೋ, ಹೋಗೇ!!' ಅಂತಂದು ಫೋನು ಬಡಿಚಿದೆ.

ಇವರ ಮಕ್ಕಳುಗಳ ಹೋಮ್‌ವರ್ಕ್ಕು ಸಾಕು, ನನ್ನನ್ನು ಹೀಗೆ ಮುಕ್ಕುವುದೂ ಸಾಕು -ಅಂತಂದುಕೊಂಡು, ಮತ್ತೆಲ್ಲಿ ಕರೆದುಬಿಡುವಳೋ ಅಂತ ಫೋನಾಫು ಮಾಡಿ ಹಾಸಿಗೆಯಲ್ಲಿ ಉರುಟಿದೆ. ಪಕ್ಕದಲ್ಲಿದ್ದ ಇವಳು ಏನಂತ ಕೇಳಿದ್ದಕ್ಕೆ ಹೇಳುವಷ್ಟು ವ್ಯವಧಾನವಿರಲಿಲ್ಲ. 'ಬೆಳಿಗ್ಗೆ ಮಾತಾಡೋಣ...' ಅಂತಂದು ಅವಳ ಬಾಯಿ ಮುಚ್ಚಿಸಿದೆ.

ಬೆಳಿಗ್ಗೆ ಏರೋಬಿಕ್ಸ್ ಮುಗಿಸಿ ಮನೆಗೆ ಬರುವಾಗ ಏಳೂ ಮುಕ್ಕಾಲಾಗಿತ್ತು. "ಅವಾಗಲಿಂದ ನಿಮ್ಮ ಮೊಬೈಲ್ ಹೊಡಕೋತಾಯಿದೆರೀ, ಯಾರೋ ಖಗ್ಸ್ ಅಂತೆ..." ಶೂ ಕಳಚುತ್ತಿರುವಾಗಲೇ ಇವಳು ಹೇಳಿದಳು. ಖಗಪತಿಯ ಹೆಸರು ಕೇಳಿದ್ದೇ ಧಸಕ್ಕೆಂದುಬಿಟ್ಟೆ! ಈ ಹೊತ್ತಿನಲ್ಲಿ ಮಾತಿಗೊದಗಿದರೆ ಮಿದುಳಿಗೇ ಕೊಕ್ಕಿಕ್ಕಿ ಹೆಸರಿಗೆ ತಕ್ಕ ಹಾಗೇ - ಕುಕ್ಕಿ ಕುಕ್ಕಿ ಜಗಿದುಬಿಟ್ಟಾನು! ಕೂಡಲೇ ರಿಸ್ಕಿನ ಸಮಾಚಾರ ನೆನಪಾಯಿತು. ಇನ್ನು, ಎಂದೇ ಸಿಕ್ಕರೂ ಅಪ್ಪಚ್ಚಿ ಮಾಡಿಬಿಟ್ಟಾನಂದುಕೊಂಡು, "ಅಪರ್ಣೇ... ರಿಸ್ಕನ್ನೋದಕ್ಕೆ ಕನ್ನಡದಲ್ಲಿ ಏನು ಹೇಳುತಾರೋ?" ಎಂದು ಇವಳನ್ನು ಕೇಳಿದೆ.

"ಅಲ್ಲಾರೀ, ನಾನು ನಿಮ್ಮ ಫೋನ್ ಬಗ್ಗೆ ಹೇಳಿದರೆ ನೀವೇನೋ ಕೇಳುತ್ತೀರಲ್ಲ..."

"ಮೊದಲು ನಾನು ಕೇಳಿದ್ದಕ್ಕೆ ಅದೇನೂಂತ ಹೇಳುಮ್ಮಾ..."

"ಯಾಕೇಂತ ನೀವು ಹೇಳಿದರೆ ಉಳಿದ ಮಾತು!"

ಇದಕ್ಕೇನನ್ನುವುದು? ಈ ಹೆಂಗಸರ ಜಾಯಮಾನವೇ ಇಷ್ಟು. ಕೇಳಿದ್ದೆಲ್ಲ ತನಿಖೆ. ಸಮಯ, ಸಂದರ್ಭದ ಸಹಿತ ವಿವರಿಸಬೇಕು... ಇವಳ ಜತೆಯೋ- ಏನನ್ನೂ ಹ್ರಸ್ವವಾಗಿ ಆಡುವಂತಿಲ್ಲ. ಎಲ್ಲವನ್ನೂ ಪೀಠಿಕೆಯಿಂದ ಸುರುಗೊಳಿಸಿ ಕ್ರಮೇಣ ಬೆಳೆಸಬೇಕು. ಇಲ್ಲದಿದ್ದರೆ ನನ್ನ ಸಂಹಾರವಾದರೂ ಪ್ರಕರಣದ ಉಪಸಂಹಾರವಿರುವುದಿಲ್ಲ!

ಒಟ್ಟಾರೆ, ಖಗಪತಿಯೆಂದರೆ ಯಾರು ಅನ್ನುವುದರಿಂದ ಮೊದಲ್ಗೊಂಡು ರಿಸ್ಕಿನವರೆಗೆ ಮಾತು ಬೆಳೆಸಿದ್ದಾಯಿತು. "ಈಗ ಲಾದರೂ ಹೇಳುತೀಯಾ?" ಟೀವಿಯೆದುರು ಜಮಾಯಿಸುವ ಇಡೀ ಕರ್ನಾಟಕದ ಖಂಡವೇ- ಅಚ್ಚಗನ್ನಡದ ಸ್ವಚ್ಛ ಮಾತುಗಾತಿಯೆಂದೂ, ಕನ್ನಡಕೋವಿದೆಯೆಂದೂ ಬಗೆಯುವ ಇವಳಲ್ಲಿ ಪರಾಕು ಹೇಳಿ ಮೊರೆಯಿಟ್ಟೆ.

"ರಿಸ್ಕ್? ರಿಸ್ಕ್... ರಿಸ್ಕ್..." ಅಂತ ಮೂರು ನಾಲ್ಕು ಸರ್ತಿ ಗೊಣಗಿಕೊಂಡು, ಒಂದಷ್ಟು ಯೋಚಿಸಿ - ಅನಾಹುತ, ಅಚಾತುರ್ಯ, ಅಪಾಯ... ಅಂತೆಲ್ಲ ಉದ್ದನೆ ಲಿಸ್ಟು ಹೇಳಿದಳು. "ಅದೇನೋ ಸರಿ, ಡೋಂಟ್ ಟೇಕ್ ರಿಸ್ಕ್ ಅನ್ನೋದಕ್ಕೆ ಏನು ಹೇಳೋದು?" ಎಂದು ಕೇಳುತ್ತಲೇ ದಂಗುಬಡಿದು ಹೋದಳು. "ಅದನ್ನು ಅಕ್ಷರಶಃ ಟ್ರಾನ್ಸ್‌ಲೇಟ್ ಮಾಡೋಕಾಗುಲ್ಲ ಅಂತ ಹೇಳಿಬಿಡಿ... ಬೇಕಿದ್ದರೆ ಛಾನ್ಸ್ ತಗೋಳೋದೂ ಅನ್ನಬಹುದಲ್ಲಾ, ಥತ್... ಈ ಛಾನ್ಸ್ ಕೂಡ ಇಂಗ್ಲಿಷಾಯಿತಲ್ಲವಾ...?" ಅಂತ ಪೇಚಾಡಿಕೊಂಡು, "ಸರಿ... ಅದೇನು ಮಾಡುತೀರೋ ಮಾಡಿಕೊಳ್ಳಿ. ನನಗಿನ್ನು ಕೆಲಸ ಇದೆ... ಒಂಬತ್ತೂವರೆಗೆ ಚೀಫ್-ಸೆಕ್ರೆಟರಿ ಬರಹೇಳಿದ್ದಾರೆ..." ಅಂತಂದು ಮರೆಯಾದಳು.

ಅಷ್ಟರಲ್ಲಿ ಮತ್ತೆ ಫೋನು ರಿಂಗಾಯಿತು. ಎಷ್ಟೇ ಅಲ್ಲಲ್ಲ ಒಲ್ಲೊಲ್ಲೆನೆಂದುಕೊಂಡರೂ- ಕರೆದಿದ್ದು ಖಗಪತಿಯೇ! "ಯೆಸ್ ಖಗ್ಸ್... ನಾನೇ ಮಾಡೋಣ ಅಂತಿದ್ದೆ..." ಅನ್ನುತ್ತ ಪೂರ್ತಾ ಕಿಸಿಯುವ ಮೊದಲೇ, "ಡು ಯು ನೋ ವಾಟ್ ದಿ ಜೋಕ್ ಆಫ್ ದಿ ಮಿಲೇನಿಯಮ್ ಈಸ್?" ಎನ್ನುತ್ತ ಅವನೂ ನಗತೊಡಗಿದ. ವಿಷಯವೇನೆಂದರೆ- ರಿಸ್ಕ್ ಅನ್ನುವುದನ್ನು ಕನ್ನಡದಲ್ಲಿ ರಿಸ್ಕು ಅಂತನ್ನುತ್ತಾರೆಂದು ಅವನ ಮಗನ ಟೀಚರು ಹೋಮವರ್ಕನ್ನು ತಿದ್ದಿ ಕಳಿಸಿದ್ದರಂತೆ! ಅದೂ ಅಲ್ಲದೆ, ಅವರು ಕೊಟ್ಟ ಹೋಮ್‌ವರ್ಕೇ ಬೇರೆಯಂತೆ. ಕೆಲವು ಇಂಗ್ಲಿಷ್ ಪದಗಳನ್ನು ಕನ್ನಡದಲ್ಲಿ ಹೇಗೆ ಬರೆಯುವುದು ಅಂದರೆ ಇಂಗ್ಲಿಷನ್ನು ಕನ್ನಡ ಲಿಪಿಯಲ್ಲಿ ಹೇಗೆ ಬರೆಯುವುದು - ಅನ್ನುವುದು ಕೊಟ್ಟ ಸವಾಲು! ಅದನ್ನು- ಮಗನಿಗೆ ಮಗನೂ, ಅಪ್ಪನಿಗೆ ಅಪ್ಪನೂ ತಪ್ಪು ಅರ್ಥೈಸಿ ನನ್ನ ತಲೆ ತಿಂದಿದ್ದರು!

ಒಟ್ಟಾರೆ ನಾನೂ ಬಲುಕಾಲ ನಕ್ಕು ಹಗುರಾದೆ. ಅಷ್ಟರಲ್ಲಿ ತಂಗೀಮಣಿ ಎಂದಿನಷ್ಟೇ ಅನಮಾತ್ತಾಗಿ ಕರೆದಳು. "ಲೋ..." ಅಂದಳು. ಇನ್ನೇನು ಕರ್ಮವೋ ಅಂತ ತಳಮಳಿಸುತ್ತಲೇ, "ಹೇಳೆಲೇ..." ಅಂತೊರಲಿದೆ. "ಏನೋ ನೀನು! ಬರೇ ಬುರುಡೆ ಬಿಡುತೀಯಾ... ಕರ್ನಾಟಕದ ಸ್ಟೇಪಲ್ ಫುಡ್ ಅಂದರೆ ಬಿಸಿಬೇಳೆಭಾತು, ಮೊಸರನ್ನ ಅಂತೆ... ಅಷ್ಟೂ ಗೊತ್ತಾಗುಲ್ಲವಾ ನಿಂಗೆ!" ಬಡಬಡ ಆಡುತ್ತಲೇ ಹೋದಳು. ಫೋನು ಬದಿಗಿಟ್ಟು ನಗತೊಡಗಿದೆ.

ಮೀಟಿಂಗಿಗೆಂದು ರೆಡಿಯಾಗಿ ಬಂದ ಇವಳು ಏನಾಯಿತೆಂದು ತಿಳಿಯದೆ ಮಿಕಿಮಿಕಿಸಿದಳು. ನಾನೋ- ಮತ್ತೂ ಗಹಗಹಿಸಿದೆ!!

**ಕಷ್ಟಗಳು ಬರುವುದು ನಮ್ಮನ್ನು ಸೋಲಿಸುವುದಕ್ಕಾಗಿ ಅಲ್ಲ; ನಮ್ಮೊಳಗಿನ ದೃಢತೆಯನ್ನು ಲೋಕಕ್ಕೆ ಕಾಣಿಸುವುದಕ್ಕಾಗಿ.**

# ಪಡುಮಲೆಯ ಒಡಲಲ್ಲಿ...

-ಮೊದಲನೇ ಪುಟದಿಂದ

ಕೆಡುಕು-ವಿಕಲ್ಪಗಳಿಂದ ರಕ್ಷಿಸುವ ಸಲುವಾಗಿ ರಾಜ್ಯಗಳ ಮೇಲೆ ಒತ್ತಡ ಹೇರುವುದೇ ಈ ಮರುವರ್ಗೀಕರಣದ ಉದ್ದೇಶ.

### 'ಜಾಗತಿಕ ನೈಸರ್ಗಿಕ ಪರಂಪರೆಯ ತಾಣ'ದಿಂದ ತೆರವು?

ಈ ತಾಣಗಳಿಗೆ ಆಗುತ್ತಿರುವ ಹಾನಿಯನ್ನು ತಡೆಯಲು ರಾಜ್ಯಗಳು ಇನಿತೂ ಆಸಕ್ತಿ ವಹಿಸಿಲ್ಲವೆಂದಾದರೆ, ಅವು 'ಅಸಾಧಾರಣ ಜಾಗತಿಕ ಮೌಲ್ಯ'ವನ್ನು ಕಳೆದುಕೊಂಡರೆ ಆಗ ಯುನೆಸ್ಕೊ ಆ ಸ್ಥಳಗಳನ್ನು ತನ್ನ 'ಜಾಗತಿಕ ನೈಸರ್ಗಿಕ ಪರಂಪರೆಯ ಯಾದಿ'ಯಿಂದ ತೆರವುಗೊಳಿಸುತ್ತದೆ. ನೈಸರ್ಗಿಕ ಪರಂಪರೆಯ ತಾಣವನ್ನು ಸಂರಕ್ಷಿಸಲು ವಿಫಲವಾದ ರಾಜ್ಯದ ಬಗ್ಗೆ ಯುನೆಸ್ಕೊ ಕೈಗೊಳ್ಳಬಹುದಾದ ಗರಿಷ್ಠ ಕ್ರಮ ಇಷ್ಟೆ!

### ಧನ ಸಹಾಯ?

ಯುನೆಸ್ಕೊದ ಜಾಗತಿಕ ನೈಸರ್ಗಿಕ ಪರಂಪರೆಯ ಒಡಂಬಡಿಕೆಗೆ ಸಹಿ ಹಾಕಿರುವ ಎಲ್ಲ ರಾಷ್ಟ್ರಗಳು 'ಜಾಗತಿಕ ಪರಂಪರೆಯ ನಿಧಿ'ಗೆ ದೇಣಿಗೆ ನೀಡಬೇಕಾಗಿದೆ. ತಮ್ಮದೇ ವಿತ್ತ ಸಂಪನ್ಮೂಲಗಳಿಂದ ತಮ್ಮಲ್ಲಿರುವ ಜಾಗತಿಕ ನೈಸರ್ಗಿಕ ಪರಂಪರೆಯ





ಸ್ಥಳಗಳನ್ನು ಸಂರಕ್ಷಿಸಲು ಸಾಧ್ಯವಿಲ್ಲದ ರಾಜ್ಯಗಳಿಗೆ ಧನಸಹಾಯ ಒದಗಿಸಲು ಈ ನಿಧಿ ಬಳಕೆಯಾಗುತ್ತದೆ. 1) ತುರ್ತು ನೆರವು 2) ಪೂರ್ವ ಸಿದ್ಧತೆಗೆ ನೆರವು 3) ಸಂರಕ್ಷಣೆ ಮತ್ತು ನಿರ್ವಹಣೆ - ಹೀಗೆ ಮೂರು ವಿಭಾಗಗಳಲ್ಲಿ ಹಿಂದುಳಿದ ದೇಶ, ಮಧ್ಯಮ ಆದಾಯದ ದೇಶ, ಸಣ್ಣ ದ್ವೀಪ ರಾಜ್ಯಗಳು - ಇತ್ಯಾದಿ ಅರ್ಹತೆಯನ್ನನುಸರಿಸಿ ಈ ನೆರವು ಬಟವಾಡೆ ಆಗುತ್ತದೆ.

### ಅನನುಕೂಲತೆಗಳು

ಪಶ್ಚಿಮ ಘಟ್ಟ ಪ್ರದೇಶದ ಅನೇಕ ಸ್ಥಳಗಳು ಈಗಾಗಲೇ ನೂಕುನುಗ್ಗಲಿನ ಪ್ರವಾಸಿ ಕೇಂದ್ರಗಳಾಗಿ ಮಾರ್ಪಟ್ಟಿವೆ - ಇದರಿಂದಾಗಿ ಸ್ಥಳೀಯ ನೈಸರ್ಗಿಕ ಸಂಪನ್ಮೂಲ ಮತ್ತು ಜೀವಸಂಕುಲ ಇನ್ನಿಲ್ಲದ ಒತ್ತಡ ಅನುಭವಿಸುತ್ತಿವೆ. ಇಂಥ ಬಹುತೇಕ ಪ್ರವಾಸಿ ಸ್ಥಳಗಳ ಮೇಲೆ ಯಾವ ನಿಯಂತ್ರಣವೂ ಇಲ್ಲದುದರಿಂದಾಗಿ ಅಲ್ಲಿ ಪ್ರವಾಸಿ ವಿಹಾರಧಾಮಗಳು ಯಾವ ಎಗ್ಗೂ ಇಲ್ಲದೆ ತಲೆ ಎತ್ತುತ್ತಿವೆ. ಯುನೆಸ್ಕೊದ 'ಜಾಗತಿಕ ನೈಸರ್ಗಿಕ ಪರಂಪರೆಯ ತಾಣ' ಎಂಬ ಹಣೆಪಟ್ಟಿ ಇನ್ನಷ್ಟು ಪ್ರವಾಸೀ ನೂಕುನುಗ್ಗಲಿಗೆ ಕಾರಣವಾಗಬಹುದು, ಈಗಾಗಲೇ ಇರುವ ಸೂಕ್ಷ್ಮ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಬಹುದು. ಯುನೆಸ್ಕೊ ದಿನಕ್ಕಿಂತಿಷ್ಟು ಪ್ರವಾಸಿಗಳು ಮಾತ್ರ ಸಂದರ್ಶಿಸಬಹುದು ಎಂಬ ನಿಯಮವನ್ನು ಹೊಂದಿದ್ದರೂ ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ನಿಭಾವಣೆ ಇಲ್ಲದೇ ಹೋದರೆ ಪರಿಸ್ಥಿತಿ ಇನ್ನಷ್ಟು ಗಂಭೀರವಾದೀತು. 'ಜಾಗತಿಕ ನೈಸರ್ಗಿಕ ಪರಂಪರೆಯ ಯಾದಿ'ಯಲ್ಲಿ ಸೇರ್ಪಡೆಗೊಳ್ಳುವುದರಿಂದ ಅನನುಕೂಲತೆ ಇದೊಂದೇ.

### ನಮ್ಮದೇಕೆ ವಿರೋಧ?

- ಪಶ್ಚಿಮ ಘಟ್ಟದಂತಹ ಅಪೂರ್ವ ಜೀವ ವೈವಿಧ್ಯದ ತಾಣದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ತೊಡಕಾಗುತ್ತದೆ ಎಂಬ ಸ್ಥಳೀಯ ಕೆಲವು ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿದು ರಾಜ್ಯ ಸರಕಾರ ಪಶ್ಚಿಮ ಘಟ್ಟವನ್ನು 'ಜಾಗತಿಕ ನೈಸರ್ಗಿಕ ಪರಂಪರೆಯ ಯಾದಿ'ಯಲ್ಲಿ ಸೇರಿಸುವುದಕ್ಕೆ ವಿರೋಧ ಸೂಚಿಸುತ್ತಿದೆ. ಹಾಗಿದ್ದರೆ ಪಶ್ಚಿಮ ಘಟ್ಟ ಆ ಅಷ್ಟು ಪ್ರದೇಶದ ಜನರಿಗೆ ಮಾತ್ರ ಸಂಬಂಧಪಟ್ಟದ್ದೆ?
- ಯುನೆಸ್ಕೊ ಗುರುತಿಸುವಿಕೆಯಿಂದ ಪಶ್ಚಿಮ ಘಟ್ಟದ ಸಂರಕ್ಷಣೆ ಮತ್ತು ಪ್ರವಾಸೋದ್ಯಮದ ಪ್ರವರ್ಧನೆಗೆ ಆಗಬಹುದಾದ ಅನುಕೂಲಗಳ ಬಗ್ಗೆ ಸಂಬಂಧಿತ ಎಲ್ಲರ ಸಮಾಲೋಚನೆ ನಡೆಸಲು ಸರಕಾರ ಮುಂದಾಗಬೇಕಿತ್ತು. ಅಷ್ಟಕ್ಕೂ ಪಶ್ಚಿಮ ಘಟ್ಟ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೇರಿದ್ದೇ?
- ಪಶ್ಚಿಮ ಘಟ್ಟವನ್ನು ಜಾಗತಿಕ ನೈಸರ್ಗಿಕ ಪರಂಪರೆಯ ಯಾದಿಗೆ ಸೇರಿಸುವ ಪ್ರಸ್ತಾವನೆ ಸಲ್ಲಿಸುವ ಮೊದಲೇ ರಾಜ್ಯ ಸರಕಾರ ಅಸಮ್ಮತಿ ಸೂಚಿಸಿದ್ದರೂ ಭಾರತ ಸರಕಾರ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಹಾಗಾದರೆ, ಭಾರತಕ್ಕೆ ಮಾತ್ರ ಸೇರಿದ್ದೆ ಈ ಪಶ್ಚಿಮ ಘಟ್ಟ?
- ಯುನೆಸ್ಕೊದ ಜಾಗತಿಕ ನೈಸರ್ಗಿಕ ಪರಂಪರೆಯ ಒಡಂಬಡಿಕೆ ಹೇಳುವಂತೆ ಪಶ್ಚಿಮ ಘಟ್ಟ ಇಂದಿನ ಮತ್ತು ಮುಂದಿನ ಸಮಸ್ತ ಮನುಕುಲಕ್ಕೆ ಸೇರಿದ್ದೇ?

**ನಿರೇನ್ ಜೈನ್** ವಾಸ್ತುಶಿಲ್ಪಿ, ಕುದುರೆಮುಖ ವನ್ಯಜೀವಿ ಪ್ರತಿಷ್ಠಾನದ ಸಂಚಾಲಕರು.
**ದೀಪಿಕಾ ಪ್ರಸಾದ್** ಸಾಫ್ಟ್‌ವೇರ್ ಇಂಜಿನಿಯರ್, ಕುದುರೆಮುಖ ವನ್ಯಜೀವಿ ಪ್ರತಿಷ್ಠಾನದ ಹವ್ಯಾಸಿ ಕಾರ್ಯಕರ್ತರು.
**ಈಮೈಲ್** : *nirenjain@hotmail.com*

# ಪದಬಂಧ



### ಎಡದಿಂದ ಬಲಕ್ಕೆ

1. ಅರ್ಥವಿಲ್ಲದ ಮಾತಿನ ಆದಿಯಲ್ಲೇ ಹುಟ್ಟಿಸಿದಾತ ಹಗುರಾಗಿ ಬಿಟ್ಟಿದ್ದಾನೆ! (4)
3. ಅಹಂಕಾರವೂ ಆಗಬಲ್ಲ ನನ್ನದೆಂಬ ಭಾವ (4)
5. ದುಷ್ಟಸಂಹಾರಕ್ಕಾಗಿ ದೇವರು ತಳೆದ ಹತ್ತು ಬಗೆಯ ಹುಟ್ಟು (5)
6. 'ಸಂಪಾದಕ' ಮಧ್ಯೆ ಪಾದ ಊರಿದ್ದು ಇದರ ಮೇಲೆ (2)
7. ಸ್ಥಿರವಲ್ಲದ ಪಾದ (3)
8. ಉತ್ತಮ ಕಾವ್ಯದಲ್ಲಿ ಗುಳುಗುಳಿಸಿ ಹೊರಹೊಮ್ಮಬೇಕಾದ್ದು (4)
10. ಒಳ್ಳೆಯ ಚಿಂತಕ-ವಿವೇಕಿಯೂ ಹೌದು (4)
12. ಈತ ಬುದ್ಧಿ ಇಲ್ಲದವ (4)
14. ಬೇಂದ್ರೆಯವರಿಗೆ ಸಹಜವಾಗಿ ಒಪ್ಪುವ ವಿಶೇಷಣ (4)
16. 'ಇಲ್ಲ'ವೆನ್ನುವುದರಲ್ಲಿ ಹಿತವೂ ಇದೆ; ರತವೂ ಇದೆ (3)
17. ಕಾರಂತರ ಚೋಮನಿಗೆ ಬಲು ಇಷ್ಟದ ವಾದ್ಯ (2)
18. ಈತ ದುರಹಂಕಾರಿ - ಗರ್ವ ನೆತ್ತಿಗೇರಿದವ (5)
19. ಸತ್ತವರ ಆತ್ಮಶಾಂತಿಗಾಗಿ ಅವರ ಮಕ್ಕಳು ಬಿಟ್ಟದ್ದು (4)
20. ಇದು ಯುದ್ಧಭೂಮಿ (4)

### ಮೇಲಿನಿಂದ ಕೆಳಕ್ಕೆ

1. ಪರಿಶೀಲನೆಯೂ ಆಗಬಲ್ಲ ಧ್ಯಾನ (5)
2. ನೃತ್ಯಾಭ್ಯಾಸದಲ್ಲಿ ಹೆಜ್ಜೆಯ ಗತಿ (5)
3. ಕೇರಳೀಯರಿಗೆ ಇಷ್ಟವಾದ ಕಂದಮೂಲ (5)
4. ಸಂಸ್ಕೃತ ಪಂಡಿತರು ಬೆಳ್ಳಿಬೆಟ್ಟವನ್ನು ಹೀಗೆಂದಾರು (5)
7. ಸತ್ತವರ ಗುಣಗಾನದ ಹಾಡು (5)
9. ವರ್ಷದ ಕೊನೆಯಲ್ಲಿ ನಡೆವ ಉತ್ಸವ (3)
11. ವಾಹನವನ್ನು ಮುನ್ನಡೆಸುವವ (3)
12. ವೃಕ್ಷಕಂಡಾಗ ಕಾಡಿದ ಸಾವಿನ ಬಗೆಗಿನ ಭಯ (5)
13. ಈತ ಮನುಷ್ಯರನ್ನೇ ಕೊಲ್ಲುವವ (5)
14. ಜಾತಿ-ವಿಜಾತಿಗಳ ಸಮ್ಮಿಶ್ರಣ (5)
15. ರತಿಪತಿಗೆ ಹೀಗೊಂದು ಹೆಸರು (5)

**ಕಳೆದ ವಾರದ ಸರಿ ಉತ್ತರ**






15-7-2012ರಿಂದ 21-7-2012ರ ವರೆಗೆ

**ಮೇಷ:** ಕಾರ್ಯರಂಗದಲ್ಲಿ ಪರಿಶ್ರಮದಿಂದಲೇ ಕಾರ್ಯಾನುಕೂಲವಾಗಲಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಅಭಿವೃದ್ಧಿ ತೋರಿಬಂದರೂ ಉದಾಸೀನತೆ ಸಲ್ಲದು. ವ್ಯಾಪಾರಿ, ವ್ಯವಹಾರಸ್ಥರಿಗೆ ಉತ್ತಮ ಧನಾನುಕೂಲವಾಗಲಿದೆ. ಆಪ್ತರ ಕಾಲೋಚಿತ ಸಲಹೆ ಸೂಕ್ತ ಮಾರ್ಗದರ್ಶನದಿಂದ ಮನಸ್ಸಿಗೆ ಸಮಾಧಾನ ತರಲಿದೆ. ಸಂಚಾರದಿಂದ ಕ್ಲೇಶ ಹಾಗೂ ಆರೋಗ್ಯ ಹಾನಿಯಿಂದ ಧನವ್ಯಯವುಂಟಾಗಲಿದೆ. ನಿರುದ್ಯೋಗಿಗಳಿಗೆ ಉದ್ಯೋಗ ಲಾಭ. ಎಲ್ಲ ವೃತ್ತಿಯವರಿಗೆ ಅಡೆತಡೆಗಳಿಂದ ಕೆಲಸ ಕಾರ್ಯಗಳು ಮುಗಿಯಲಿವೆ. ಧಾರ್ಮಿಕ ಶುಭ ಮಂಗಲ ಕಾರ್ಯಗಳು ಸಾರ್ಥಕ್ಯವನ್ನು ಪಡೆಯಲಿವೆ.
**ಶುಭವಾರಗಳು : ಕುಜ, ಗುರು, ಶುಕ್ರವಾರ.**

**ವೃಷಭ:** ದೈವವು ವಿಮುಖ, ವಿಧಿಯ ಕೋಪ, ಕೈಲಾಗದ ಪರಿಸ್ಥಿತಿಯನ್ನು ಪುಷ್ಟೀಕರಿಸಲಿದೆ. ನೂತನ ಕೆಲಸ ಕಾರ್ಯಗಳಿಗೆ ಇದು ಸಕಾಲವಾಗದು. ಎಲ್ಲ ವಿಚಾರದಲ್ಲಿ ಮಾತಿಗಿಂತ ಮೌನವೇ ಲೇಸೆನಿಸೀತು. ನಿಧಾನವಾಗಿ ಕೆಲಸಗಳಾಗಲಿವೆ. ಧನಾಗಮನ ಅಷ್ಟಕ್ಕಷ್ಟೇ ವೃತ್ತಿರಂಗದಲ್ಲಿ ಉದ್ವೇಗದಿಂದ ಕ್ಷುಲ್ಲಕ ವಿಚಾರಗಳು ತೋರಿಬಂದು ಕಲಹಕ್ಕೆ ಕಾರಣವಾಗದಂತೆ ಜಾಗ್ರತೆ ವಹಿಸಬೇಕಾಗುತ್ತದೆ. ಸಮಯ ಸಾಧಕರಿಂದ ವ್ಯಾಕುಲಗೊಳ್ಳುವಿರಿ. ಬಂಡವಾಳದಲ್ಲಿ ಪಾಲುದಾರರ ವಂಚನೆಕ್ಕೆಡೆಯಿದೆ. ದೈಹಿಕವಾಗಿ ಆಗಾಗ ಆರೋಗ್ಯಕ್ಕೆ ಕೊರತೆ ತಂದೀತು. ಶ್ರೀದೇವರ ಪ್ರಾರ್ಥನೆ ಅಗತ್ಯವಿದೆ.
**ಶುಭವಾರಗಳು: ಬುಧ, ಗುರು, ಶುಕ್ರವಾರ.**

**ಮಿಥುನ:** ನಯವಂಚಕರ ಚಾಡಿ ಮಾತು, ಸಹಯೋಗ ಇತ್ಯಾದಿಗಳಿಂದ ಕಿರಿಕಿರಿ ತೋರಿಬಂದರೂ ನಿಮ್ಮ ಪ್ರಾಮಾಣಿಕತೆಯಿಂದಾಗಿ ಕೊಂಚ ಅಭಿವೃದ್ಧಿ ನೆಮ್ಮದಿ ಇರುತ್ತದೆ. ಆಗಾಗ ಗೃಹಿಣಿಯ ಮೇಲೆ ಮುನಿಸು ತಂದೀತು. ದೂರಸಂಚಾರ ಹಾಗೂ ಆಹಾರ ವ್ಯತ್ಯಾಸದಿಂದ ಅನಾರೋಗ್ಯಕ್ಕೆ ಕಾರಣವಾದೀತು. ವಾರಾಂತ್ಯ ಕೆಲವು ಘಟನೆಗಳು ಆತಂಕಕಾರಿಯಾದರೂ ನಿಮ್ಮ ಪ್ರಯತ್ನಬಲದಿಂದ ಎದುರಿಸುವಂತಾಗುತ್ತದೆ. ಹಾಗೆ ಆರ್ಥಿಕ ಪರಿಸ್ಥಿತಿಯಲ್ಲಿ ಅನಿರೀಕ್ಷಿತ ಖರ್ಚುವೆಚ್ಚ ವಿದ್ಯಾರ್ಥಿಗಳು ನಿರಾಶೆ ಹೊಂದುವ ಪರಿಸ್ಥಿತಿ ತೋರಿಬರುತ್ತದೆ. ರಾಜಕೀಯ ವಲಯದಲ್ಲಿ ಎಲ್ಲ ರೀತಿಯ ಗೊಂದಲಗಳು ಮಾನಸಿಕ ಸ್ಥಿತಿಯನ್ನು ಅಸ್ಥಿರತೆಗೊಳಿಸುವುದು.
**ಶುಭವಾರಗಳು: ಗುರು, ಶುಕ್ರ, ಭಾನುವಾರ.**

**ಕರ್ಕ:** ವಿದ್ಯಾರ್ಥಿಗಳಿಗೆ ಉನ್ನತ ಅಭ್ಯಾಸದಲ್ಲಿ ಹೆಚ್ಚಿನ ಅವಕಾಶಗಳು ಹಾಗೆ ನಿರುದ್ಯೋಗಿಗಳಿಗೆ ಸಹ ಹೆಚ್ಚಿನ ಅವಕಾಶಗಳು ತೋರಿಬರುವುದರಿಂದ ಇದರ ಸದುಪಯೋಗ ಮಾಡಿಕೊಂಡಲ್ಲಿ ಸಾರ್ಥಕವಾಗಲಿದೆ. ವರ್ತಕ ವರ್ಗದವರಿಗೆ ಹೆಚ್ಚಿನ ಹೂಡಿಕೆ ಹಾಗೆ ಆದಾಯ ವೃದ್ಧಿಯಾಗುತ್ತದೆ. ಸ್ಥಗಿತಗೊಂಡ ಮನೆ ಕಟ್ಟಡದ ಕೆಲಸ ಕಾರ್ಯಗಳು ಪುನಃ ಚಾಲನೆಗೆ ಬರಲಿವೆ. ನಿಮ್ಮ ಸಕಾಲದ ಸ್ಫೂರ್ತಿಯಿಂದ ಕಾರ್ಯಪೂರ್ಣವಾಗುತ್ತದೆ. ಅವಿವಾಹಿತರಿಗೆ ನೂತನ ಮೈತ್ರಿ ಕಂಕಣಬಲಕ್ಕೆ ಪೂರ್ಣವಾದೀತು.
**ಶುಭವಾರಗಳು: ಕುಜ, ಗುರು, ಶನಿವಾರ.**

**ಸಿಂಹ:** ಅಧಿಕಾರಿ ವರ್ಗದವರಿಗೆ ಮುಂಭಡ್ತಿ ವಿಳಂಬವಾದೀತು. ನೆರೆಹೊರೆ ಯವರಿಂದ ಸಣ್ಣ ಪುಟ್ಟ ವಿಚಾರಗಳಲ್ಲಿ ತಕರಾರು, ಅಥವಾ ಟೀಕೆ, ಟಿಪ್ಪಣಿಗಳಿಂದ ಬೇಸರವಾಗಲಿದೆ. ಗೃಹಬದಲು ಯಾ ಖರೀದಿಯ ಚಿಂತನೆ ಕಾರ್ಯಗತವಾಗಲಿದೆ. ಅವಿವಾಹಿತರಿಗೆ ಹೊಸ ಸಂಬಂಧ ವೈವಾಹಿಕ ಭಾಗ್ಯಕ್ಕೆ ಪೂರಕವಾಗುತ್ತದೆ. ಆಗಾಗ ಮನೆಯಲ್ಲಿ ಅತಿಥಿಗಳ ಆಗಮನ ಖರ್ಚಿಗೆ ಕಾರಣವಾದರೂ ಸಂತಸ ತಂದೀತು. ತಾಂತ್ರಿಕ ವೃತ್ತಿ -ಸಂಚಾರಿ ವೃತ್ತಿಯವರಿಗೆ ಆರ್ಥಿಕ ಸ್ಥಿರತೆ ಇರದು. ಸರಕಾರಿ ಇಲಾಖೆಯ ವಿಳಂಬದಿಂದ ಕಾರ್ಯಭಂಗವಾಗುತ್ತದೆ.
**ಶುಭವಾರಗಳು ಗುರು, ಶನಿ, ಭಾನುವಾರ.**

**ಕನ್ಯಾ:** ಉದ್ದಿಮೆದಾರರಿಗೆ ಕೈ ತುಂಬ ಕೆಲಸ ವಿದ್ದರೂ ಆರ್ಥಿಕ ಸ್ಥಿತಿ ನೆಟ್ಟಗಿರದು. ಈ ಮಧ್ಯ ಆದಾಯದ ಮೂಲವೊಂದು ಬೆಳಕಿಗೆ ಬರಲಿದೆ. ನೌಕರರ ಸಕಾಲಿಕ ಸಹಕಾರದಿಂದ ಮುನ್ನಡೆಗೆ ಸಾಧಕವಾದೀತು. ಆರೋಗ್ಯ - ಸಂಚಾರಗಳ ಬಗ್ಗೆ ಚಿಂತೆ ಇರಲಿ. ಶುಭ ಮಂಗಳ ಕಾರ್ಯಗಳು ದೇವತಾ ಕಾರ್ಯಗಳ ಸುಗ್ಗಿ ಮಕ್ಕಳ ವಿದ್ಯಾಭ್ಯಾಸದ ಚಿಂತೆ ಬಗೆ ಹರಿಯಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಸಾಲ ವಾಪಾಸಾತಿಯಿಂದ ನೆಮ್ಮದಿ. ಬಂಧುಆಗಮನ ಹರುಷ ತರುತ್ತದೆ. ಅವಿವಾಹಿತರು ಕಂಕಣಬಲದ ಭಾಗ್ಯವನ್ನು ಹೊಂದಲಿದ್ದಾರೆ. ವಿದ್ಯಾರ್ಥಿಗಳ ಅಸಡ್ಡೆ ಅಭ್ಯಾಸದಲ್ಲಿ ಹಿನ್ನಡೆ ತಂದೀತು. ವಾರಾಂತ್ಯ ಶುಭ ಫಲಗಳಿವೆ.
**ಶುಭವಾರಗಳು : ಕುಜ, ಬುಧ, ಶುಕ್ರವಾರ.**

**ತುಲಾ:** ವ್ಯರ್ಥಲಾಪಗಳಿಂದ ಕಾಲಹರಣವಾದೀತು. ಪಟ್ಟಭದ್ರಹಿತಾಸಕ್ತಿಗಳಿಂದಾಗಿ ವೃತ್ತಿರಂಗದಲ್ಲಿ ಕಿರಿಕಿರಿ ಇರುತ್ತದೆ. ಸಾಲದೆಂಬಂತೆ ಸಾಂಸಾರಿಕ ತಾಪತ್ರಯಗಳು ಹೆಚ್ಚಲಿವೆ. ಧಾರ್ಮಿಕ ಕಾರ್ಯಗಳಲ್ಲಿ ವೈರಾಗ್ಯ ಭಾವ ಬೆಳೆಯಲಿದೆ. ವಾಹನಾದಿಗಳಿಂದ ಧನನಷ್ಟ ಅಥವಾ ಖರೀದಿಯಲ್ಲಿ ಮೋಸ ಬಯಲಾದೀತು. ಮುಂಬಡ್ತಿಯಲ್ಲಿ ವಿಳಂಬ ತಂದೀತು. ಗುರುಹಿರಿಯರೊಡನೆ ವಾಗ್ಯುದ್ಧ ಮನೆಯಲ್ಲಿ ಅಂತಃಕಲಹಕ್ಕೆ ಕಾರಣರಾಗದಿರಿ. ಯೋಗ್ಯ ವಯಸ್ಕರಿಗೆ ಕಂಕಣಬಲದ ಬಗ್ಗೆ ಮಾನಸಿಕ ಅಸ್ಥಿರತೆ ಕಾಡಲಿದೆ. ಬಂದ ಅವಕಾಶಗಳು. ಕಷ್ಟದಿಂದಲೇ ಎಲ್ಲ ಗುರಿ ಮುಟ್ಟಲಿದೆ.
**ಶುಭವಾರಗಳು: ಚಂದ್ರ, ಕುಜ, ಬುಧವಾರ.**

**ವೃಶ್ಚಿಕ:** ಮಾನಸಿಕ ಅಸ್ಥಿರತೆ ಕಾಡಲಿದೆ. ಎಚ್ಚರಿಕೆಯಿಂದ ಹೆಜ್ಜೆಯಿಟ್ಟಲ್ಲಿ ಯಶಸ್ಸು ನಿಮ್ಮದಾದೀತು. ಸಾಂಸಾರಿಕವಾಗಿ ಖರ್ಚುವೆಚ್ಚಗಳ ಬಾಬ್ತು ಅತೃಪ್ತ ಮನೋಭಾವದಿಂದಾಗಿ ತಲೆಬಿಸಿಯಾದೀತು. ರಕ್ತದೋಷಾದಿಗಳಿಂದ ವ್ಯಾಧಿಸಂಭವ. ಮಡದಿಗೆ ತವರು ಮನೆಯ ಗೌರವ. ವೃತ್ತಿರಂಗದಲ್ಲಿ ಸಣ್ಣಪುಟ್ಟ ಬದಲಾವಣೆ ತೋರಿಬಂದರೂ ಸ್ಥಾನಮಾನಕ್ಕೆ ಕುಂದಾಗದು. ಎಲ್ಲವನ್ನೂ ಸಮಾಧಾನಚಿತ್ತದಿಂದ ಅನುಭವಿಸುವಂತಾದೀತು. ವ್ಯಾಪಾರ ವ್ಯವಹಾರಗಳು ಸ್ಪರ್ಧಾತ್ಮಕವಾಗಿ ಆದಾಯವನ್ನು ಹೆಚ್ಚಿಸುವುದು. ಅವಿವಾಹಿತರಿಗೆ ವೈವಾಹಿಕ ಬಂಧನದ ಮಾತುಕತೆ ನಡೆಯಲಿದೆ. ಬಂದ ಅವಕಾಶಗಳನ್ನು ಸದುಪಯೋಗಿಸಿಕೊಳ್ಳುವುದು ಅಗತ್ಯವೆನಿಸಲಿದೆ.
**ಶುಭವಾರಗಳು: ಶುಕ್ರ, ಭಾನು, ಚಂದ್ರವಾರ.**

**ಧನು:** ನಿರುದ್ಯೋಗಿಗಳಿಗೆ ವ್ಯರ್ಥ ಅಲೆದಾಟವೇ ಆದೀತು. ಕೌಟುಂಬಿಕವಾಗಿ ದುಡ್ಡೂ ದಂಡ ಬಾಂಧವ್ಯಕ್ಕೂ ಸಂಚಕಾರ ಬಂದೀತು. ರಾಜಕೀಯದಲ್ಲಿ ಸ್ಥಾನಚ್ಯುತಿಯ ದುಃಖ ಹಾಗೆ ಕಾರ್ಯಸಾಧನೆ ಗಣನೆಗೇ ಬಾರದು. ದೇವತಾ ಕಾರ್ಯಗಳಿಗೆ ವಿಘ್ನ ತಂದೀತು. ಅವಿವಾಹಿತರಿಗೆ ಯೋಗ್ಯ ಸಂಬಂಧಗಳು ಕೂಡಿ ಬರುತ್ತದೆ. ಸರಕಾರೀ ಕಾರ್ಯಗಳು ಸುಗಮವಾಗಿ ನಡೆಯಲಿದೆ. ಧನದ ಚಿಂತೆ ಆರೋಗ್ಯದ ಕೊರತೆ ಆಗಾಗ್ಗೆ ಕಾಣಿಸಿದರೂ ವಿಶೇಷ ಭೀತಿಗೆ ಅವಕಾಶವಿಲ್ಲ, ದುಡುಕು ಕಾರ್ಯಗಳಿಂದ ಸಮಸ್ಯೆ. ಶೇರು ಮುಂತಾದ ವಿನಿಯೋಗ ನಷ್ಟಕ್ಕೆ ಕಾರಣವಾದೀತು. ಸಾಮಾಜಿಕವಾಗಿ ಕೀರ್ತಿ ಗೌರವ ಇದ್ದರೂ ಅಪವಾದ ಭೀತಿ ತೋರಿಬಂದೀತು.
**ಶುಭವಾರಗಳು: ಕುಜ, ಶುಕ್ರ, ಶನಿವಾರ.**

**ಮಕರ:** ನಿಮ್ಮ ವಿರೋಧಿಗಳಿಗಿದು ಅಪಜಯದ ಕಾಲ. ಕೃಷಿ, ನಾರು ಉದ್ದಿಮೆ ಆಹಾರ ಪದಾರ್ಥಗಳ ವೃತ್ತಿಯವರಿಗೆ ಧನ ಲಾಭ ತಂದೀತು. ಮಾಂಗಲ್ಯ ಕಾರ್ಯಗಳಿಗಾಗಿ ಚಿನ್ನ ಒಡವೆ ಖರೀದಿ, ಭಾಗ್ಯವೃದ್ಧಿ ವಾಹನ ಬದಲಿ ನಡೆದೀತು. ವೃತ್ತಿರಂಗದಲ್ಲಿ ಕೆಲವರಿಗೆ ಮುಂಭಡ್ತಿ ಉಳಿದವರಿಗೆ ಸ್ಥಾನ ಪಲ್ಲಟ ಯೋಗವಿದೆ. ಪ್ರವಾಹಾದಿಗಳಿಂದ ಕಾರ್ಯಸಿದ್ಧಿ ಇದ್ದರೂ ದೇಹಾರೋಗ್ಯದ ಬಗ್ಗೆ ಜಾಗ್ರತೆ ಇರಬೇಕು. ಕಿವಿಕಚ್ಚುವವರ ಬಗ್ಗೆ ಜಾಗ್ರತೆ ವಹಿಸಿರಿ. ಅವಿವಾಹಿತರಿಗೆ ಕಂಕಣಬಲಕ್ಕೆ ನಾಂದಿ. ಆಗಾಗ ಕಾರ್ಯ ಒತ್ತಡಗಳಿದ್ದರೂ ಕಾರ್ಯಸಾಧನೆಯಾಗಲಿದೆ. ಆಗಾಗ ಆರ್ಥಿಕ ಸ್ಥಿತಿ ಸುಧಾರಿಸುತ್ತಾ ಹೋಗಲಿದೆ.
**ಶುಭವಾರಗಳು ಬುಧ, ಶುಕ್ರ, ಭಾನುವಾರ.**

**ಕುಂಭ:** ಮಹತ್ವದ ಕಾರ್ಯಗಳಿಗಾಗಿ ಧನವಿನಿಯೋಗ ಮಾಡಬೇಕಾದೀತು. ಹೆಂಡತಿ ಮಕ್ಕಳಿಂದ ಸುಖ ಸಂತಸಗಳಿವೆ. ಆಗಾಗ ಶತ್ರುಭಯ ತತ್ಸಂಬಂಧವಾಗಿ ತಲೆಬಿಸಿಯಿದೆ. ಪಿತ್ತಾಧಿಕ್ಯಗಳಿಂದ ಶಾರೀರಿಕ ರುಜೆ ಕಾಣಿಸೀತು. ಶುಶ್ರೂಷೆಗಾಗಿ ಧನವ್ಯಯವಾಗಲಿದೆ. ವೃತ್ತಿರಂಗದಲ್ಲಿ ನಿಮ್ಮ ಪ್ರಭಾವದಿಂದ ಕಾರ್ಯಸಾಧನೆಯಾದರೂ ಅಪವಾದಭೀತಿ ತಪ್ಪದು. ಸರಕಾರೀ ಉದ್ಯೋಗಿಗಳಿಗೆ ವರ್ಗಾವಣೆಯ ಸೂಚನೆ ತೋರಿಬಂದೀತು. ಒಮ್ಮೊಮ್ಮೆ ನಿಮ್ಮ ಔದಾರ್ಯವು ನಿಮಗೆ ಪೂರಕವಾದೀತು. ಜಾಗ್ರತೆ. ಆದಾಯ ವೃದ್ಧಿಯಿಂದ ಆರ್ಥಿಕವಾಗಿ ಸಮತೋಲನವಿರುತ್ತದೆ.
**ಶುಭವಾರಗಳು: ಶನಿ, ಶುಕ್ರ, ಬುಧವಾರ.**

**ಮೀನ:** ವ್ಯಾಪಾರ ವ್ಯವಹಾರಗಳು ಅಭಿವೃದ್ಧಿಯನ್ನು ಹೊಂದಲಿವೆ. ಸಾಂಸಾರಿಕವಾಗಿ ಅನಿರೀಕ್ಷಿತವಾಗಿ ಪ್ರವಾಸ ಯೋಗವಿದೆ. ಅವಿವಾಹಿತರ ಪ್ರಯತ್ನಬಲಕ್ಕೆ ವೈವಾಹಿಕ ಭಾಗ್ಯ. ವಾರಾಂತ್ಯದಲ್ಲಿ ಸ್ವಾರ್ಜಿತ ವಿತ್ತ ವರ್ಧನೆಯಿದೆ. ವಿಲಾಸ ಜೀವನ ಕೊಂಚ ಆರೋಗ್ಯ ಹಾಳು ಮಾಡೀತು. ಸರಕಾರೀ ಕೆಲಸ ಕಾರ್ಯಗಳು ಗುಪ್ತ ಜನರ ಮೂಲಕ ನಡೆದು ಹೋದೀತು. ಗೃಹದಲ್ಲಿ ಬಂಧುಗಮನದಿಂದ ಸಂತಸ ತಂದರೂ ನೆಮ್ಮದಿ ಇರದು. ತಂದೆ ಮಕ್ಕಳೊಳಗೆ ಭಿನ್ನಾಭಿಪ್ರಾಯ ತಂದೀತು. ಚೌರ್ಯದಿಂದ ಆಭರಣಗಳ ನಷ್ಟವಾಗದಂತೆ ಎಚ್ಚರವಹಿಸಿ. ವಿದ್ಯಾರ್ಥಿಗಳಿಗೆ ಅನಿರೀಕ್ಷಿತ ಅವಕಾಶಗಳು ಒದಗಿ ಬಂದು ಮುಂದಿನ ಅಭ್ಯಾಸಕ್ಕೆ ಪೂರಕವಾಗುತ್ತದೆ.
**ಶುಭವಾರಗಳು: ಬುಧ, ಗುರು, ಶುಕ್ರವಾರ.**